ಪಲ್ಲವಿ ಆಕುರಾತಿ, ಭಾ.ಆ.ಸೇ
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ

GOVERNMENT OF KARNATAKA

C/o ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
2ನೇ ಮಹಡಿ, ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು-560001
✆ : 080-22879381/82/83
ಇ-ಮೇಲ್ : icps.kar@gmail.com

ಅ.ಸ.ಪ ಸಂಖ್ಯೆ:ಐಸಿಪಿಎಸ್/ಜೆಸಿಎಲ್/ಸಿ.ಜೆ.ಕಾನ್ಫರೆನ್ಸ್/25/2018-19 /1018 ದಿನಾಂಕ: 30.12.2020

ವಿಷಯ: To provide sufficient staff and infrastructure facility to all the Juvenile Justice Boards/Addl. JJ. Boards in the State.

ಉಲ್ಲೇಖ: 1. ಕರ್ನಾಟಕ ರಾಜ್ಯ ಕಾನೂನುಸೇವಾ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಕರಾಕಾಸೇಪ್ರಾ 18 ಜೆಜೆಬಿ 2018 ದಿನಾಂಕ:25.09.2020
2. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:10208/2018

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 19.08.2020ರಂದು ನಡೆದ High Level Committee ಸಭೆಯಲ್ಲಿ ರಾಜ್ಯದ ಎಲ್ಲಾ ಬಾಲನ್ಯಾಯ ಮಂಡಳಿಗಳಿಗೆ ಅಗತ್ಯವಿರುವ ಸಿಬ್ಬಂಧಿಗಳ ಹಾಗೂ ಮೂಲಭೂತ ಸೌಕರ್ಯಗಳ ವ್ಯವಸ್ಥೆಯನ್ನು ಒದಗಿಸುವ ಕುರಿತು ಪ್ರಸ್ತಾಪಿಸಲಾಗಿದ್ದು, ಸದರಿ ಮಾಹಿತಿಯನ್ನು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಬೆಂಗಳೂರು ಇವರು ಜಿಲ್ಲೆಗಳಿಂದ ಪಡೆದು ಕ್ರೂಢೀಕರಿಸಿ ಸಲ್ಲಿಸಿರುತ್ತಾರೆ. ಸದರಿ ಮಾಹಿತಿಯ ಪ್ರತಿಯನ್ನು ಉಲ್ಲೇಖ(1)ರ ಪತ್ರದೊಂದಿಗೆ ಲಗತ್ತಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ. ಅಲ್ಲದೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್‌ಅರ್ಜಿ ಸಂಖ್ಯೆ: 10208/2018ರ ಆದೇಶದಲ್ಲೂ ಸಹ ಎಲ್ಲಾ ಬಾಲನ್ಯಾಯ ಮಂಡಳಿಗಳಿಗೆ ಮೂಲಭೂತ ಸೌಕರ್ಯವನ್ನು ಮುಖ್ಯವಾಗಿ ಬಾಲನ್ಯಾಯ ಮಂಡಳಿಯ ಕಲಾಪಗಳನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ವೀಡಿಯೋ ಕಾನ್ಫರೆನ್ಸ್ ಸೌಕರ್ಯ ಒದಗಿಸಲು ತಿಳಿಸಲಾಗಿದೆ.

ಹಾಗಾಗಿ ಸದರಿ ಮಾಹಿತಿಯ ಬಗ್ಗೆ ಆದ್ಯ ಗಮನ ನೀಡಿ, ಮುದ್ದಾಂ ದೂರವಾಣಿ ಕರೆಯ ಮುಖಾಂತರ ಬಾಲನ್ಯಾಯ ಮಂಡಳಿಯ ಅಧ್ಯಕ್ಷರೊಂದಿಗೆ ಮಾತನಾಡಿ, ಬಾಲನ್ಯಾಯ ಮಂಡಳಿಗೆ ಅಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳ ವ್ಯವಸ್ಥೆಯನ್ನು ಕೂಡಲೇ ಮಾಡಿ, ಸದರಿ ಸೌಕರ್ಯ ತಲುಪಿದ ಬಗ್ಗೆ ಹಾಗೂ ವೀಡಿಯೋ ಕಾನ್ಫರೆನ್ಸ್ ಸೌಲಭ್ಯ ಒದಗಿಸಿರುವ ಕುರಿತು ಮಾಹಿತಿ ಪಡೆದು, ಅನುಪಾಲನಾ ವರದಿಯನ್ನು ತುರ್ತಾಗಿ ಈ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

ಒಂದು ವೇಳೆ ಯಾವುದೇ ಜಿಲ್ಲೆಯ ಬಾಲನ್ಯಾಯ ಮಂಡಳಿಗೆ ಮೂಲಭೂತ ಸೌಕರ್ಯ ಹಾಗೂ ವೀಡಿಯೋ ಕಾನ್ಫರೆನ್ಸ್ ಸೌಲಭ್ಯ ಒದಗಿಸಿಲ್ಲದೇ ಇರುವುದು ಕಂಡುಬಂದಲ್ಲಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಉತ್ತರ ನೀಡಬೇಕಾಗಿರುವುದರಿಂದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರು ತಾವಾಗಿರುವುದರಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯಕ್ರಮವನ್ನು ಶೀಘ್ರವಾಗಿ ತೆಗೆದುಕೊಂಡು, ಅನುಪಾಲನಾ ವರದಿಯನ್ನು ನೀಡಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಶ್ರೀ. ಸುರಲ್ಕರ್ ವಿಕಾಸ್ ಕಿಶೋರ್.
ಮಾನ್ಯ ಜಿಲ್ಲಾಧಿಕಾರಿಗಳು,
ಅಧ್ಯಕ್ಷರು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ